56 ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ನಗರ
ಎಸ್.ಸಿ.ಸಂಖ್ಯೆ 1319/2024

ಸಿ.ಡಬ್ಲ್ಯೂಃ7 ಪಿ.ಡಬ್ಲ್ಯೂಃ2

ಪ್ರಮಾಣ ವಚನ ಭೋದಿಸಲಾಯಿತು.

ದಿಃ 17.12.2025

| | |
|---|---|
| ಹೆಸರು | ಕಾಶಿನಾಥಯ್ಯ ಶಿವಣ್ಣ ಗೌಡರ್ |
| ತಂದೆಯ ಹೆಸರು | ಶಿವಬಸವನ ಗೌಡ |
| ವಯಸ್ಸು | 76 ವರ್ಷಗಳು |
| ಕೆಲಸ | ನಿವೃತ್ತ ಕೆ.ಇ.ಬಿ ನೌಕರ |
| ವಾಸ | ವೆಂಕಟರಮಣ ಬಡಾವಣೆ, ಚಿತ್ರದುರ್ಗ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಮ್ಮ ಮನೆಯಲ್ಲಿ ನಾನು, ಚಾಸಾ 8 ನನ್ನ ಹೆಂಡತಿ, ಚಾಸಾ 10 ನನ್ನ ಮಗಳು, ಚಾಸಾ 9 ಸೊಸೆ, ನನ್ನ ತಾಯಿ ಪ್ರಮಿಳಾ ದೇವಿ ವಾಸವಾಗಿರುತ್ತೇವೆ. ನನ್ನ ಮಗ ರೇಣುಕಾ ಸ್ವಾಮಿ ನಮ್ಮ ಜೊತೆಗೆ ಇದ್ದರು. ನನ್ನ ಮಗ ಬಿ.ಕಾಂ ಅರ್ಧದವರೆಗೆ ಓದಿದ್ದನು. ಆತ ಚಿತ್ರದುರ್ಗದ ಐ.ಯು.ಡಿ.ಪಿ ಲೇಔಟ್ ನಲ್ಲಿರುವ ಅಪೋಲೋ ಫಾರ್ಮಸಿಯಲ್ಲಿ ಕೆಲಸ ಮಾಡುತ್ತಿದ್ದನು. ನನ್ನ ಮಗ ಪ್ರತಿ ಸೋಮವಾರದಿಂದ ಗುರುವಾರದವರೆಗೆ ಬೆಳಗ್ಗೆ 9.00 ರಿಂದ 9.30 ಗಂಟೆಯ ಸಮಯದಲ್ಲಿ ಕೆಲಸಕ್ಕೆ ಹೋಗಿ ಮಧ್ಯಾಹ್ನ 2.30 ಗೆ ಬರುತ್ತಿದ್ದನು. ಮತ್ತೆ ಸಂಜೆ 4.00 ಗಂಟೆಗೆ ಕೆಲಸಕ್ಕೆ ಹೋಗಿ 7.30 ಗೆ ಬರುತ್ತಿದ್ದನು. ಆತನಿಗೆ ಪ್ರತಿ ಶುಕ್ರವಾರ ರಜೆ ಇತ್ತು. ಶನಿವಾರ ಮತ್ತು ರವಿವಾರ ಬೆಳಗ್ಗೆ 9.00 ಗಂಟೆಗೆ ಹೋಗಿ, ಮಧ್ಯಾಹ್ನ 2.30 ಗಂಟೆಗೆ ಬರುತ್ತಿದ್ದ. ಸಂಜೆ 4.30 ರಿಂದ 5.00 ಗಂಟೆ ಸಮಯದಲ್ಲಿ

ಹೋಗಿ ವಾಪಸ್ಸು ರಾತ್ರಿ 11.30 ಗಂಟೆಗೆ ಬರುತ್ತಿದ್ದನು. ಪ್ರತಿದಿನ ನನ್ನ ಮಗ ನನ್ನ ಮಗಳಿಗೆ ಸೇರಿದ ಯಮಹ ಸ್ಕೂಟರ್ ನಲ್ಲಿ ಹೋಗಿ ಬರುತ್ತಿದ್ದನು.

ದಿಃ08.06.2024 ರಂದು ಶನಿವಾರ ನನ್ನ ಮಗ ಕೊನೆಯದಾಗಿ ಬೆಳಗ್ಗೆ 9.00 ಗಂಟೆಗೆ ಮನೆಯಿಂದ ಹೋಗಿದ್ದನು. ಪ್ರತಿದಿನ ನನ್ನ ಮಗ ಕೆಲಸಕ್ಕೆ ಹೋಗುವಾಗ ಐಡಿ, ಚಿನ್ನದ ಚೈನ್, ಉಂಗುರ, ಲಿಂಗದ ಕರಡಿಗೆ, ವಾಚ್ ಧರಿಸಿಕೊಂಡು ಹೋಗುತ್ತಿದ್ದನು. ಜೊತೆಗೆ ಮೊಬೈಲನ್ನು ತೆಗೆದುಕೊಂಡು ಹೋಗುತ್ತಿದ್ದನು.ನನ್ನ ಮಗ 10.30 ಗಂಟೆಗೆ ನನ್ನ ಹೆಂಡತಿಗೆ ಕರೆ ಮಾಡಿ ಸ್ನೇಹಿತರು ಸಿಕ್ಕಿರುತ್ತಾರೆ, ಮಧ್ಯಾಹ್ನ ಊಟಕ್ಕೆ ಬರುವುದಿಲ್ಲ ಸಂಜೆ 7.00 ಗಂಟೆಗೆ ಬರುತ್ತೇನೆ ಅಂತ ಹೇಳಿದ್ದನು. ನನ್ನ ಮಗ ಮನೆಯಿಂದ ಹೊರಡುವಾಗ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಕ್ರೀಂ ಬಣ್ಣದ ತುಂಬು ತೋಳಿನ ಶರ್ಟ್ ಧರಿಸಿದ್ದನು. ನನ್ನ ಮಗನ ಶರ್ಟ್ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಶರ್ಟನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ 8 ಗುರುತಿಸಲಾಗಿದೆ.

ಸಂಜೆ 7.00 ಗಂಟೆಯಾದರೂ ನನ್ನ ಮಗ ಬರಲಿಲ್ಲ. ಆಗ ನನ್ನ ಹೆಂಡತಿ ಆತನಿಗೆ ಫೋನ್ ಮಾಡಿದರು. ಆಗ ಆತನ ಮೊಬೈಲ್ switch off ಅಂತ ಬಂತು. ಮತ್ತೆ ಮತ್ತೆ ಪ್ರಯತ್ನಿಸಿದರೂ switch off ಅಂತ ಬಂತು. ನನ್ನ ಹೆಂಡತಿ ಮಗನ ಮೊಬೈಲ್ switch off ಅಂತ ಬರುತ್ತಿದೆ ಅಂತ ಹೇಳಿದರು. ನಾನು ಕರೆ ಮಾಡಿದರೂ ಅದು switch off ಅಂತ ಬಂತು. ಸ್ವಲ್ಪ ಆತಂಕಗೊಂಡೆವು. ಆತ ರಾತ್ರಿ 10.00 ಗಂಟೆ, 11 ಗಂಟೆಯಾದರೂ ಬರಲಿಲ್ಲ.

ರಾತ್ರಿ 11.30 ಗಂಟೆ ಸುಮಾರಿಗೆ ನಾನು ಆಟೋದಲ್ಲಿ ಅಪೋಲೋ ಪಾರ್ಮಸಿಗೆ ಹೋದೆನು. ಅಲ್ಲಿ ನಾನು ನೋಡಿದಾಗ ಅದು ಕ್ಲೋಸ್ ಆಗಿತ್ತು. ನಾನು ಅದೇ ಆಟೋದಲ್ಲಿ ವಾಪಸ್ಸು ಬಂದೆನು. ಸಂಜೆ ವೇಳೆಯಲ್ಲಿ ನನ್ನ ಮಗನ ಸ್ನೇಹಿತರಾದ ಹರೀಶ್ ಮತ್ತು ಸಿದ್ದಲಿಂಗ ಇವರನ್ನು ವಿಚಾರಿಸಿದೆನು. ಉಳಿದವರನ್ನು ವಿಚಾರಿಸಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ನನ್ನ ಮಗನ ಸ್ನೇಹಿತರು ಅವರಿಗೆ ನನ್ನ ಮಗ ಬೇಟಿಯಾಗಿಲ್ಲ ಅಂತ ತಿಳಿಸಿದರು. ಬೆಳಗಿನವರೆಗೆ ನೋಡೋಣ ಅಂತ ಕಾಯ್ದೆವು.

ಭಾನುವಾರ ಬೆಳಗ್ಗೆಯಿಂದ ಮಧ್ಯಾಹ್ನ ದವರೆಗೆ ಬೇರೆ ಬೇರೆ ಬ್ರಾಂಚ್ ಗಳಿಗೆ ಹೋಗಿ ವಿಚಾರಿಸಿದೆನು. ನಮ್ಮ ಸಂಬಂಧಿಕರಾದ ಮಲ್ಲಿಕಾರ್ಜುನಯ್ಯ ಇವರಿಗೆ ನನ್ನ ಮಗ ಕೆಲಸಕ್ಕೆ ಹೋದವನು ಬಂದಿಲ್ಲ ಅಂತ ತಿಳಿಸಿದೆನು. ಅದಕ್ಕೆ ಆತ ಗಂಡು ಮಗ ಬರುತ್ತಾನೆ, ಇವತ್ತು ಒಂದು ದಿನ ಕಾಯೋಣ ಅಂತ ಹೇಳಿದನು. ಆ ದಿನ ಅಂದರೆ ಭಾನುವಾರದಂದು ನನ್ನ ಮಗ ವಾಪಸ್ಸು ಬರಲಿಲ್ಲ. ಸೋಮವಾರದಂದು ಬೆಳಗ್ಗೆ 10 ರಿಂದ 11 ಗಂಟೆ ಸಮಯದಲ್ಲಿ ಮಲ್ಲಿಕಾರ್ಜುನಯ್ಯ ನವರಿಗೆ ಕರೆ ಮಾಡಿ ನನ್ನ ಮಗ ಇನ್ನೂ ಬಂದಿಲ್ಲ, ಹೆದರಿಕೆ ಆತಂಕ ಆಗುತ್ತಿದೆ ಅಂತ ಹೇಳಿದೆನು. ಅದಕ್ಕೆ ಮಲ್ಲಿಕಾರ್ಜುನಯ್ಯ ಇವರು ನಮ್ಮ ಮನೆಗೆ ಬರುತ್ತೇನೆ ಅಂತ ಹೇಳಿದರು. ಅದರಂತೆ ಮಲ್ಲಿಕಾರ್ಜುನಯ್ಯ ಇವರು ನಮ್ಮ ಮನೆಗೆ ಬಂದರು. ನಾನು ಮತ್ತು ಮಲ್ಲಿಕಾರ್ಜುನಯ್ಯ ಇವರು ಅವರ ಮೋಟಾರ್ ಬೈಕ್‌ನಲ್ಲಿ ಅಪೋಲೋ ಪಾರ್ಮಸಿಗೆ ಹೋದೆವು. ಅಲ್ಲಿ ಕೆಲಸ ಮಾಡುವ ಹುಡುಗರನ್ನು ನನ್ನ ಮಗನ ಬಗ್ಗೆ ವಿಚಾರಿಸಿದೆವು. ಅದಕ್ಕೆ ಅವರು ನನ್ನ ಮಗ ಶನಿವಾರದಿಂದ ಪಾರ್ಮಸಿಗೆ ಬಂದಿಲ್ಲ ಅಂತ ಹೇಳಿದರು. ಮುಂದುವರಿದು

ಆ ಹುಡುಗರು ನನ್ನ ಮಗ ಉಪಯೋಗಿಸುತ್ತಿದ್ದ ಸ್ಕೂಟರ್ ಬಾಲಾಜಿ ಬಾರ್ ಹತ್ತಿರ ಇದೆ ಅಂತ ಹೇಳಿದರು. ಅಲ್ಲಿ ಕೆಲಸ ಮಾಡುವ ಹುಡುಗರಿಗೆ ನನ್ನ ನಂಬರ್ ಕೊಟ್ಟು ನನ್ನ ಮಗ ವಿಷಯ ಗೊತ್ತಾದಲ್ಲಿ ತಿಳಿಸುವಂತೆ ಹೇಳಿದೆನು. ಆ ಹುಡುಗರು ಹೇಳಿದಂತೆ ಬಾಲಾಜಿ ಬಾರ್ ಬಳಿ ಹೋಗಿ ನೋಡಿದಾಗ ಅಲ್ಲಿದ್ದ ಸ್ಕೂಟರ್ ನಮ್ಮದ್ದಾಗಿತ್ತು. ಆಗ ನಾನು ನನ್ನ ಮಗಳಿಗೆ ಪೋನ್ ಮಾಡಿ ಸ್ಕೂಟರ್ ನ ಇನ್ನೊಂದು ಬೀಗ ಇದ್ದರೇ ತೆಗೆದುಕೊಂಡು ಬರುವಂತೆ ಹೇಳಿದೆನು. ಅದರಂತೆ ನನ್ನ ಮಗಳು ಆಟೋದಲ್ಲಿ ಸ್ಕೂಟರ್ ಕೀಯನ್ನು ತೆಗೆದುಕೊಂಡು ಬಂದರು. ನನ್ನ ಮಗಳು ಆ ಸ್ಕೂಟರನ್ನು ತೆಗೆದುಕೊಂಡು ಮನೆಗೆ ಹೋದಳು. ಇಷ್ಟೆಲ್ಲಾ ಆಗುವ ವೇಳೆಗೆ ಸಂಜೆ 5.00 ಗಂಟೆಯಾಗಿತ್ತು.

ಸ್ಕೂಟರ್ ಇದ್ದ ಜಾಗದಲ್ಲಿ ನಾನು ಇದ್ದಾಗ ಬೆಂಗಳೂರಿನಿಂದ ಒಂದು ಪೋನ್ ಬಂದು, ನನ್ನ ಹೆಸರನ್ನು ಕೇಳಿದರು, ನಾನು ಹೆಸರನ್ನು ಹೇಳಿದಾಗ ಅವರು ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯಿಂದ ಮಾತನಾಡುತ್ತಿದ್ದೇನೆ ಅಂತ ಹೇಳಿದರು. ನನ್ನ ಮಗ ಎಲ್ಲಿದ್ದಾನೆ ಅಂತ ಕೇಳಿದರು. ಅದಕ್ಕೆ ನಾನು ನನ್ನ ಮಗ ಶನಿವಾರದಂದು ಹೋದವನು ಸಿಗುತ್ತಿಲ್ಲ ಅಂತ ಹೇಳಿದೆನು. ನನ್ನ ಮಗನ ವಿಚಾರವಾಗಿ ತಿಳಿದುಕೊಳ್ಳಲು ಮಾರನೇ ದಿನ ಬೆಳಗ್ಗೆ ಪೊಲೀಸ್ ಠಾಣೆಗೆ ನಮ್ಮ ಮನೆಯವರನ್ನು ಕರೆದುಕೊಂಡು ಬರುವಂತೆ ತಿಳಿಸಿದರು. ಆ ಪೊಲೀಸರು ಪೋನ್‌ನಲ್ಲಿ ಇನ್ನೂ ಏನೇನೋ ಹೇಳುತ್ತಿದ್ದರು. ನನಗೆ ಶ್ರವಣ ದೋಷ ಇರುವುದರಿಂದ ಆ ಮೊಬೈಲ್ ಕರೆಯನ್ನು ಮಲ್ಲಿಕಾರ್ಜುನಯ್ಯ ನವರಿಗೆ ಕೊಟ್ಟೆನು. ಅವರು ಮೊಬೈಲ್‌ನಲ್ಲಿ ಮಾತನಾಡಿ, ನಾಳೆ ಪೊಲೀಸ್ ಠಾಣೆಗೆ

ಹೋಗಬೇಕಾಗುತ್ತದೆ ಅಂತ ತಿಳಿಸಿದರು. ಅದಕ್ಕೆ ಮಲ್ಲಿಕಾರ್ಜುನಯ್ಯ ಇವರಿಗೂ ಸಹ ಪೊಲೀಸ್ ಠಾಣೆಗೆ ಬರುವಂತೆ ಕೇಳಿಕೊಂಡೆನು.

ಅದರಂತೆ ಕಾರನ್ನು ಬುಕ್ ಮಾಡಿಕೊಂಡು ಬೆಳಗ್ಗೆ 5.00 ಗಂಟೆ ಸುಮಾರಿಗೆ ನಾನು, ನನ್ನ ಹೆಂಡತಿ ಮತ್ತು ಮಲ್ಲಿಕಾರ್ಜುನಯ್ಯ ಇವರು ಹೊರಟೆವು. ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಬಂದಾಗ ಸಮಯ ಬೆಳಗ್ಗೆ 9.30 ಗಂಟೆಯಾಗಿತ್ತು. ನಾವು ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಬಂದಾಗ ಬೆಂಗಳೂರಿನಲ್ಲಿ ಇದ್ದ ನನ್ನ ಅಣ್ಣನ ಮಗ ಹಾಗೂ ತಂಗಿಯ ಮಗ ಇಬ್ಬರೂ ಬಂದಿದ್ದರು. ಮಲ್ಲಿಕಾರ್ಜುನಯ್ಯ ಮತ್ತು ನನ್ನ ಅಣ್ಣನ ಮಗ ಪೊಲೀಸ್ ಠಾಣೆಯ ಒಳಗೆ ಹೋದರು. ಸ್ವಲ್ಪ ಸಮಯದ ನಂತರ ನನ್ನ ಅಣ್ಣನ ಮಗ ಕಾರ್ ಬಳಿ ಬಂದು, ನನಗೂ ಮತ್ತು ನನ್ನ ಹೆಂಡತಿಗೂ ಧೈರ್ಯವಾಗಿ ಇರಿ, ರೇಣುಕಾ ಸ್ವಾಮಿಯ ಕೊಲೆಯಾಗಿದೆ ಅಂತ ಹೇಳಿದನು. (ಸಾಕ್ಷಿದಾರರು ಈ ಹಂತದಲ್ಲಿ ಅಳುತ್ತಿದ್ದರು).

ಏಕೆ ಕೊಲೆಯಾಗಿದೆ ಅಂತ ನನ್ನ ಅಣ್ಣನ ಮಗನನ್ನು ಕೇಳಿದಾಗ ನಟ ದರ್ಶನ್ ಕಡೆಯವರಿಗೆ ಕೆಟ್ಟದಾಗಿ ಮೆಸೇಜ್ ಮಾಡಿರುವುದರಿಂದ ಕೊಲೆ ಮಾಡಿರುತ್ತಾರೆ ಅಂತ ತಿಳಿಸಿದರು. ನಾನು, ನನ್ನ ಹೆಂಡತಿ ಪೊಲೀಸ್ ಠಾಣೆಯ ಒಳಗೆ ಹೋದೆವು. ನನ್ನ ಮಗನ ಕೊಲೆಯಾಗಿದ್ದು ವಿಕ್ಟೋರಿಯಾ ಆಸ್ಪತ್ರೆಗೆ ಬರಬೇಕೆಂದು ಹೇಳಿದರು. ಸುಮಾರು 11.30 ಗಂಟೆಗೆ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿಯ ಶವಾಗಾರಕ್ಕೆ ಕರೆದುಕೊಂಡು ಹೋದರು. ಸ್ಟ್ರೆಚ್ಚರ್ ಮೇಲೆ ಮಲಗಿದ್ದ ಶವವನ್ನು ತೋರಿಸಿದರು. ಶವವನ್ನು ನೋಡಿದಾಗ

ತಲೆಯಲ್ಲಿ ತೂತುಗಳು ಬಿದ್ದಿದ್ದವು, ಎಡಭಾಗದ ಕಿವಿ ಕತ್ತರಿಸಿತ್ತು, ಕಣ್ಣುಗಳಿಗೆ ಗಾಯ ಆಗಿತ್ತು. ಮೂಗು, ಬಾಯಿಗಳಿಗೆ ಏಟುಗಳಾಗಿದ್ದವು, ಎದೆ ಪುಡಿ ಪುಡಿಯಾಗಿತ್ತು. ದೇಹದ ತುಂಬೆಲ್ಲಾ ಏಟಿನ ಗಾಯಗಳು ಬಿದ್ದಿದ್ದವು. ಮರ್ಮಾಂಗಕ್ಕೆ ಹೊಡೆದಿದ್ದರು. ಆತನ ಒಂದೇ ವೃಷಣ ಇತ್ತು, ಮೈತುಂಬಾ ಸುಟ್ಟ ಗಾಯಗಳು ಇದ್ದವು. ಶವವನ್ನು ನೋಡಿದಾಗ ನನ್ನ ಮಗನ ಮೇಲೆ ಶರ್ಟ್ ಅಂದರೆ ಕರಿ ಬಣ್ಣದ ಟೀ ಶರ್ಟ್ ಇತ್ತು, ಆ ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಮು.ಮಾ 1 ನ್ನು ಗುರುತಿಸಿ ಅದು ಶವ ನೋಡಿದಾಗ ಆತನ ಮೇಲಿದ್ದ ಶರ್ಟ್ ಎಂದು ಗುರುತಿಸಿರುತ್ತಾರೆ. ನನ್ನ ಮಗ ಡಾಲರ್ ಕಂಪನಿಯ ಅಂಡರ್ ವೇರ್ ಧರಿಸಿದ್ದನು. ನ್ಯಾಯಾಲಯದ ಮುಂದಿರುವ ಅಂಡರ್ ವೇರನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ 2 ಎಂದು ಗುರುತಿಸಲಾಗಿದೆ. ಉಡುದಾರವೂ ಇತ್ತು. ಅದನ್ನು ನೋಡಿದರೆ ಗುರುತಿಸಿಸುತ್ತೇನೆ. ನ್ಯಾಯಾಲಯದ ಮುಂದಿರುವ ಉಡುದಾರವನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ 3 ಎಂದು ಗುರುತಿಸಲಾಗಿದೆ.

ಶವವನ್ನು ನಾನು ಗುರುತಿಸಿ ಅದು ನನ್ನ ಮಗ ರೇಣುಕಾ ಸ್ವಾಮಿಯ ಶವ ಅಂತ ಹೇಳಿದೆನು. ಆ ಕಾಲಕ್ಕೆ ನನ್ನ ತಂಗಿಯ ಮಗ ಸಿದ್ದಲಿಂಗ ಸ್ವಾಮಿ ಮತ್ತು ಇನ್ನು ಇಬ್ಬರು ವ್ಯಕ್ತಿಗಳು ಸಾಕ್ಷಿಯಾಗಿ ರುಜು ಮಾಡಿದರು. ಅವರು ಸುಮಾರು 25-26 ವರ್ಷದವರಾಗಿದ್ದರು. ಪೊಲೀಸರು ನನ್ನನ್ನು ವಿಚಾರಿಸಿದರು. ಆ ಕಾಲಕ್ಕೆ ಪೋಟೋ ತೆಗೆದರು. ಆ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನಿಪಿ.4 ರಿಂದ 9 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ಶವವನ್ನು ನಮಗೆ ಕೊಟ್ಟರು. ಸ್ವೀಕೃತಿ ಪತ್ರಕ್ಕೆ ನನ್ನ ರುಜು ಪಡೆದರು. ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಶವವನ್ನು ತೆಗೆದುಕೊಂಡು ಚಿತ್ರದುರ್ಗಕ್ಕೆ ಹೋಗಿ ಶವ ಸಂಸ್ಕಾರ ಮಾಡಿದೆವು.

ದಿಃ14.06.2024 ರಂದು ನಾನು ಮತ್ತು ನನ್ನ ಹೆಂಡತಿ ಬೆಂಗಳೂರಿಗೆ ಬಂದು ಪೊಲೀಸ್ ಕಮೀಷನರ್ ದಯಾನಂದ್ ಸಾಹೇಬರ ಬಳಿ ಹೋದೆವು. ನನ್ನ ಮಗನಿಗೆ ನ್ಯಾಯ ಕೊಡಿಸುವಂತೆ ಅವರಿಗೆ ಕೇಳಿದೆವು. ಅವರು ಡಿಸಿಪಿ ಯವರ ಬಳಿಗೆ ನಮ್ಮನ್ನು ಕಳುಹಿಸಿಕೊಟ್ಟರು. ಅದರಂತೆ ನಾವು ಡಿಸಿಪಿಯವರ ಕಚೇರಿಗೆ ಹೋಗಿ ಅವರ ಬಳಿ ಹೇಳಿಕೆ ಕೊಟ್ಟೆವು.

ದಿಃ16.06.2024 ರಂದು ರಾತ್ರಿ 9.30 ಗಂಟೆ ಸುಮಾರಿಗೆ ಮೂರು ಜನ ಪೊಲೀಸರು ಮತ್ತು ಇಬ್ಬರು ಬೇರೆ ವ್ಯಕ್ತಿಗಳು ನಮ್ಮ ಮನೆಗೆ ಬಂದರು. ಪೊಲೀಸರಲ್ಲಿ ಒಬ್ಬರು ಬೆರಳಚ್ಚು ಮಾಡುವವರು ಮತ್ತು ಇನ್ನೊಬ್ಬರು ಪೋಟೋ ತೆಗೆಯುವವರು ಇದ್ದರು. ನನ್ನ ಮಗ ಏನೇನು ಧರಿಸಿದ್ದರು ಅಂತ ಕೇಳಿದಾಗ ಚೈನ್, ಉಂಗುರ, ಕರಡಿಗೆ ಮತ್ತು ವಾಚ್ ಧರಿಸಿದ್ದನು ಅಂತ ಹೇಳಿದೆನು. 4 ನೇ ಆರೋಪಿಯ ಮನೆಯಿಂದ ಕೆಲವು ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು ಬಂದಿದ್ದು, ಗುರುತಿಸಲು ಹೇಳಿದರು. ಆರ್.ಎಸ್ ಎಂಬ ಅಕ್ಷರದ ಓವನ್ ಆಕಾರದ ಚಿನ್ನದ ಉಂಗುರ ಮತ್ತು ಚೈನನ್ನು ಗುರುತಿಸಿದೆವು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಚೈನ್ ಮತ್ತು ಉಂಗುರವನ್ನು ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ

4 ಮತ್ತು 5 ಎಂದು ಗುರುತಿಸಲಾಗಿದೆ. ಅವು ರೇಣುಕಾ ಸ್ವಾಮಿಗೆ ಸಂಬಂಧಪಟ್ಟವುಗಳು. ಮು.ಮಾ 5ರ ಮೇಲಿರುವ ಆರ್.ಎಸ್ ಎಂದರೆ ರೇಣುಕಾ ಸ್ವಾಮಿ ಮತ್ತು ಸಹನ ಎಂದರ್ಥ. ಅವುಗಳಿಗೆ ಪೂರಕವಾದ ದಾಖಲಾತಿಗಳನ್ನು ಕೇಳಿದಾಗ ನಾವು ಕೊಟ್ಟೆವು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ 6 ಮತ್ತು 7 ಎಂದು ಗುರುತಿಸಲಾಗಿದೆ. ಕಂಪ್ಯೂಟರ್‌ನಲ್ಲಿ ಬೆರಳಚ್ಚು ಮಾಡಿ ನಮಗೆ ಓದಿ ಹೇಳಿದರು. ಓದಿ ನಾನು, ನನ್ನ ಹೆಂಡತಿ ಮತ್ತು ಸೊಸೆ ಸಹನ ರುಜು ಮಾಡಿದೆವು. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನಿಪಿ.10ನ್ನು ಗುರುತಿಸಿ, ಅದರಲ್ಲಿಯ 4 ಪೋಟೋಗಳಲ್ಲಿರುವ ತನ್ನ ರುಜುಗಳನ್ನು ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ.10(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಪೋಟೋ ತೆಗೆದಿದ್ದು ಸಾಕ್ಷಿದಾರರು ಪೋಟೋಗಳನ್ನು ಗುರುತಿಸಿದ್ದು ಅವುಗಳನ್ನು ನಿಪಿ.11 ರಿಂದ 13 ಎಂದು ಈಗಾಗಲೇ ಗುರುತಿಸಲಾಗಿದೆ. ನಿಪಿ.10ಕ್ಕೆ ಪೊಲೀಸರ ಜೊತೆ ಬಂದಿದ್ದ ಇಬ್ಬರು ವ್ಯಕ್ತಿಗಳು ರುಜು ಮಾಡಿದರು. ಮು.ಮಾ 4ರ ಕುರಿತು ದಾಖಲಾತಿ ಕೇಳಿದಾಗ ಅದು ತುಂಬಾ ಹಳೆಯದಾಗಿದ್ದು, ಆ ಬಗ್ಗೆ ದಾಖಲಾತಿ ಇಲ್ಲ, ಮದುವೆಯ ಕಾಲಕ್ಕೆ ಅರಿಶಿನ ಹಚ್ಚುವ ಕಾಲಕ್ಕೆ ತೆಗೆದಿದ್ದ ಪೋಟೋ ಕೊಟ್ಟೆವು. ಎಲ್ಲಾ ಕಾರ್ಯ ಮುಗಿದಾಗ ರಾತ್ರಿ 11.30 ಗಂಟೆಯಾಗಿತ್ತು.

ಪಾಟಿ ಸವಾಲುಃ ಆರೋಪಿತರ ಪರ ವಕೀಲರು ಈ ಸಾಕ್ಷಿ ಹಾಗೂ ಚಾಸಾ 8 ರವರನ್ನು ಒಟ್ಟಿಗೆ ಪಾಟೀ ಸವಾಲು ಮಾಡುವುದಾಗಿ ಹೇಳಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.

ದಿಃ18.12.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋದಿಸಲಾಯಿತು.

ಪಾಟೀ ಸವಾಲುಃ **1** ನೇ ಆರೋಪಿ ಪರ ವಕೀಲರಾದ ಶ್ರೀ**.**ಎಸ್**.**ಬಿ ರವರಿಂದಃ

ನನಗೆ ಕನ್ನಡ ಚೆನ್ನಾಗಿ ಓದಲು ಮತ್ತು ಬರೆಯಲು ಬರುತ್ತದೆ. ಈಗ ನನಗೆ ಓದಿ ಹೇಳಿರುವಂತೆ ಪೊಲೀಸರ ಮುಂದೆ ನಾನು " ದಿಃ08.06.2024 ರಂದು ಶನಿವಾರದಂದು ಮಾಮೂಲಿಯಂತೆ -------- ಸಂಜೆ ವಾಪಸ್ಸು ಬರುವುದಾಗಿ ಹೇಳಿರುತ್ತಾನೆ "ಎಂದು ನಾನು ತನಿಖಾಧಿಕಾರಿಯ ಮುಂದೆ ನಿಡಿ.6 ರಂತೆ ಹೇಳಿಕೆ ಕೊಟ್ಟಿಲ್ಲ. ಸ್ವಲ್ಪ ಸಮಯದ ನಂತರ ಸಾಕ್ಷಿದಾರರು ಮುಂದುವರಿದು ಸಮಯವನ್ನು ಬೆಳಗ್ಗೆ 9.30 ಗಂಟೆಗೆ ನನ್ನ ಮಗನಿಗೆ ಫೋನ್ ಮಾಡಿದ್ದೇನೆ ಎಂದು ಹೇಳಿರುತ್ತೇನೆ, ಉಳಿದ ಎಲ್ಲಾ ಭಾಗವು ಸರಿಯಿದೆ ಎಂದು ನುಡಿದಿರುತ್ತಾರೆ. ದಿಃ11.06.2024 ರಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಆಗ ಮಧ್ಯಾಹ್ನ 2.30 ಗಂಟೆಗೆ ನನ್ನ ಹೆಂಡತಿ ಮಗನಿಗೆ ಫೋನ್ ಮಾಡಿದ್ದರು ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಈಗ ನನಗೆ ಓದಿ ಹೇಳಿರುವಂತೆ ಪೊಲೀಸರ ಮುಂದೆ ನಾನು " ನಂತರ ಆತ ಮಧ್ಯಾಹ್ನದ ಸಮಯದಲ್ಲಿ ನನ್ನ ಹೆಂಡತಿಗೆ ಫೋನ್ ಕರೆ ಮಾಡಿ ------ ಊಟಕ್ಕೆ ಹೊರಗಡೆ ಹೋಗುವುದಾಗಿ ತಿಳಿಸಿರುತ್ತಾನೆ" ಎಂದು ತನಿಖಾಧಿಕಾರಿಯ ಮುಂದೆ ನಿಡಿ.7 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿದಾರರು ಸಮಯವನ್ನು ಬೆಳಗ್ಗೆ 9.30 ಗಂಟೆಗೆ ಕರೆ ಮಾಡಲಾಗಿತ್ತು ಅಂತ ಹೇಳಿಕೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪುಟ ಸಂಖ್ಯೆ

2ರ ಪ್ಯಾರಾ ನಂ.2 ರಲ್ಲಿ ಹೇಳಿರುವಂತೆ "ನನ್ನ ಮಗ 10.30 ಗಂಟೆಗೆ ನನ್ನ ಹೆಂಡತಿಗೆ ಕರೆ ಮಾಡಿ ಸ್ನೇಹಿತರು ಸಿಕ್ಕಿರುತ್ತಾರೆ, ಮಧ್ಯಾಹ್ನ ಊಟಕ್ಕೆ ಬರುವುದಿಲ್ಲ ಸಂಜೆ 7.00 ಗಂಟೆಗೆ ಬರುತ್ತೇನೆ ಅಂತ ಹೇಳಿದ್ದನು" ಎನ್ನುವುದನ್ನು ತನಿಖಾಧಿಕಾರಿಯ ಮುಂದೆ ದಿಃ11.06.2024 ಹಾಗೂ ದಿಃ14.06.2024 ರಂದು ಹೇಳಿಲ್ಲ. ನನ್ನ ಮಗ ಬೆಳಗ್ಗೆ 10.30 ಗಂಟೆಗೆ ಫೋನ್ ಮಾಡಿದ್ದನು ಅಂತ ನ್ಯಾಯಾಲಯದಲ್ಲಿ ಹೇಳುವಂತೆ ನನಗೆ ಯಾರೂ ಹೇಳಿರುವುದಿಲ್ಲ. ನನ್ನ ಮಗ ಆ ದಿನ ಬೆಳಗ್ಗೆ 9.30 ಗಂಟೆಗೆ ಕರೆ ಮಾಡಿದ್ದ ಅಂತ ಮೊದಲ ಬಾರಿಗೆ ಈ ದಿನ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಬಾಲಾಜಿ ಬಾರ್ ಅಪೋಲೋ ಪಾರ್ಮಸಿಯಿಂದ 500 ಮೀಟರ್ ದೂರದಲ್ಲಿ ಚಿತ್ರದುರ್ಗದ ಐ.ಯು.ಡಿ.ಪಿ ಲೇಔಟ್‌ನಲ್ಲಿ ಇದೆ. ನನ್ನ ಮಗನ ಕುರಿತು ಬಾರ್ ನಲ್ಲಿ ವಿಚಾರ ಮಾಡಿಲ್ಲ. ದಿಃ10.06.2024 ರಂದು ನಾನು ಬಾರ್ ಹತ್ತಿರದಲ್ಲಿರುವ ಸ್ಕೂಟರ್ ಬಳಿ ಹೋಗಿದ್ದೆನು. ಬಾಲಾಜಿ ಬಾರ್‌ಗೆ ಹೋಗಿರುವುದಿಲ್ಲ. ನನ್ನ ಮಗ ಬಾಲಾಜಿ ಬಾರ್ ಹತ್ತಿರದಲ್ಲಿ ಸ್ಕೂಟರ್ ನಿಲ್ಲಿಸಿ ಹೋಗಿದ್ದ ಅಂತ ಅಪೋಲೋ ಪಾರ್ಮಸಿಯಲ್ಲಿ ಕೆಲಸ ಮಾಡುವ ಕೆಲಸಗಾರರು ಹೇಳಿದ್ದರು. ನನ್ನ ಮುಖ್ಯ ವಿಚಾರಣೆಯ ಪುಟ ಸಂಖ್ಯೆ 4ರ ಮೊದಲನೇ ಪ್ಯಾರಾದಲ್ಲಿ ಹೇಳಿರುವಂತೆ "ಆಗ ನಾನು ನನ್ನ ಮಗಳಿಗೆ ಫೋನ್ ಮಾಡಿ -------- ನನ್ನ ಮಗಳು ಆ ಸ್ಕೂಟರನ್ನು ತೆಗೆದುಕೊಂಡು ಮನೆಗೆ ಹೋದಳು" ಅಂತ ಮೊದಲನೇ ಬಾರಿಗೆ ನ್ಯಾಯಾಲಯ ದಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಗ ನನ್ನ ಹೆಂಡತಿಗೆ ಒಂದೇ ಬಾರಿ ಕರೆ ಮಾಡಿ ಹೇಳಿದ್ದನು. ನನ್ನ ಹೆಂಡತಿ ನನ್ನ ಮಗನಿಗೆ ಆ ದಿನ ಸಂಜೆ ಕರೆ ಮಾಡಿದ್ದಳು. ನಿಡಿ.6 ರಂತೆ ಪೊಲೀಸರು ಸುಳ್ಳು ಬರೆದಿರುತ್ತಾರೆ ಎಂದರೆ ಸರಿಯಲ್ಲ. ದಿಃ11.06.2024 ರಂದು ಬೆಳಗ್ಗೆ 9.30 ರಿಂದ ಬೆಳಗ್ಗೆ 10.30 ರವರೆಗೆ ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯಲ್ಲಿದ್ದೆವು. ಆ ಸಮಯದಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಪೊಲೀಸರಿಗೆ ಯಾವ ವಿಷಯವನ್ನೂ ಹೇಳಿಲ್ಲ ಎಂದರೆ ಸಾಕ್ಷಿದಾರರು ನನ್ನ ಮಗನ ಶವ ಎಲ್ಲಿ ಇದೆ ಎಂದು ಕೇಳಿದ್ದೇನೆ ಎಂದು ನುಡಿದಿರುತ್ತಾರೆ.

ದಿಃ11.06.2024 ರಂದು ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯಲ್ಲಿದ್ದಾಗ ನನ್ನ ಮಗನಿಗೆ ಯಾರಿಂದ, ಎಲ್ಲಿ ಮತ್ತು ಯಾವಾಗ ಏನಾಯಿತು ಅಂತ ನನಗೆ ಹೇಳಿಲ್ಲ. ಪೊಲೀಸರಿಗೆ ನನ್ನ ಮಗನ ಶವ ಎಲ್ಲಿ, ಏಕೆ, ಏನಾಯಿತು ಅಂತ ಅವರನ್ನು ವಿಚಾರಿಸಿದೆವು. ಅಲ್ಲಿ ಆಗ ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯಲ್ಲಿ ನಡೆಯುತ್ತಿದ್ದ ವಿಚಾರ ನನಗೆ ಖುದ್ದಾಗಿ ಗೊತ್ತಿಲ್ಲ, ಮಲ್ಲಿಕಾರ್ಜುನಯ್ಯ ನವರು ಬಂದು ನನಗೆ ಹೇಳುತ್ತಿದ್ದನು ಎಂದರೆ ಸಾಕ್ಷಿದಾರರು ಒಮ್ಮೆ ಸರಿ ಎಂದು ಒಪ್ಪಿಕೊಂಡು ನನ್ನ ಅಣ್ಣನ ಮಗನಾದ ಸಿದ್ದಲಿಂಗ ಸ್ವಾಮಿ ಇವರು ರೇಣುಕಾ ಸ್ವಾಮಿಯ ಕೊಲೆಯಾಗಿದೆ ಎಂದು ಹೇಳಿದ್ದನು ಎಂದು ನುಡಿದಿರುತ್ತಾರೆ.

ದಿಃ11.06.2024 ರಂದು ಮು.ಮಾ 4 ಮತ್ತು 5ರ ಕುರಿತು ಪೊಲೀಸರು ವಿಚಾರಿಸಿಲ್ಲ. ಅವುಗಳ ಕುರಿತು ನಾನು ಪೊಲೀಸರಿಗೆ ಹೇಳಿಲ್ಲ. ಶವಾಗಾರದಲ್ಲಿ ಬಟ್ಟೆ ಚಿನ್ನದ ವಡವೆಗಳ ಬಗ್ಗೆ ಪೊಲೀಸರು ವಿಚಾರಿಸಿದ್ದರೇ

ಎಂದರೆ ಸಾಕ್ಷಿದಾರರು ಆಗ ಬಟ್ಟೆಗಳನ್ನು ತೋರಿಸಿದ್ದರು, ಆ ಸಮಯದಲ್ಲಿ ನಾವು ಪರಿಸ್ಥಿತಿಯ ಕಂಡು ಏನು ಹೇಳುವ ಸ್ಥಿತಿಯಲ್ಲಿ ಇರಲಿಲ್ಲ ಎಂದು ನುಡಿದಿರುತ್ತಾರೆ. ಶವಾಗಾರದಲ್ಲಿ ಮು.ಮಾ 4 ಮತ್ತು 5 ರ ಕುರಿತು ಏನೂ ಹೇಳಿಲ್ಲ. ಮು.ಮಾ 4 ಮತ್ತು 5 ರ ಕುರಿತು ನನಗೆ ಗೊತ್ತಿಲ್ಲದೇ ಇರುವುದರಿಂದ ಹೇಳಿಲ್ಲ ಎಂದರೆ ಸಾಕ್ಷಿದಾರರು ಪೊಲೀಸರು ನಮ್ಮನ್ನು ಆ ಬಗ್ಗೆ ಕೇಳಲಿಲ್ಲ ಎಂದು ನುಡಿದಿರುತ್ತಾರೆ.

ದಿಃ08.06.2024 ರಂದು ನನ್ನ ಮಗ ಸಂಜೆ 6.00 ಗಂಟೆಯವರೆಗೆ ಚಿತ್ರದುರ್ಗದಲ್ಲಿ ಇದ್ದ ಎನ್ನುವ ವಿಚಾರ ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಿಃ08.06.2024 ರಂದು ಸಂಜೆ 6.00 ಗಂಟೆಯಲ್ಲಿ ನನ್ನ ಮಗ ಎಲ್ಲಿ ಇದ್ದ ಎನ್ನುವುದು ನನಗೆ ಗೊತ್ತಿರಲಿಲ್ಲ. ನನ್ನ ಮಗ ದಿಃ08.06.2024 ರಂದು ಬೆಳಗ್ಗೆ ಡ್ಯೂಟಿಗೆ ಹೋಗಿ ಮಧ್ಯಾಹ್ನ 2.30 ರವರೆಗೆ ಕೆಲಸ ಮಾಡಿ, ಮಧ್ಯಾಹ್ನ 2.30 ಗಂಟೆಗೆ ಆತ ನನ್ನ ಹೆಂಡತಿಗೆ ಕರೆ ಮಾಡಿದ್ದ ಎಂದರೆ ಸರಿಯಲ್ಲ. ದಿಃ08.06.2024 ರಂದು ಅಪೋಲೋ ಪಾರ್ಮಸಿ ಬಳಿ ಹೋಗಿ ವಿಚಾರಿಸುವ ಅವಶ್ಯಕತೆ ನಮಗೆ ಇರಲಿಲ್ಲ ಎಂದರೆ ಸಾಕ್ಷಿದಾರರು ರಾತ್ರಿ 11.00 ಗಂಟೆಯವರೆಗೆ ಹೋಗುವ ಅವಶ್ಯಕತೆ ಇರಲಿಲ್ಲ, ಆತ 7.00 ಗಂಟೆಗೆ ಬಾರದೇ ಇದ್ದಾಗ ರಾತ್ರಿ 11.00 ಗಂಟೆಗೆ ಪಾರ್ಮಸಿ ಬಳಿ ಹೋಗಬೇಕು ಎನಿಸಿದಾಗ ಹೋಗಿದ್ದೇನೆ ಎಂದು ನುಡಿದಿರುತ್ತಾರೆ.

ನನ್ನ ಮುಖ್ಯ ವಿಚಾರಣೆಯ ಪುಟ ಸಂಖ್ಯೆ 2 ರ ಕೊನೆಯ ಸಾಲು ಹಾಗೂ ಪುಟ ಸಂಖ್ಯೆ 3 ರ ಮೊದಲಿನ ಸಾಲುಗಳಲ್ಲಿ ಹೇಳಿರುವಂತೆ " ಆತ ರಾತ್ರಿ 10.00 ಗಂಟೆ, 11.00 ಗಂಟೆಯಾದರೂ ಬರಲಿಲ್ಲ ------------ ನಾನು ಹೋಗಿ

ನೋಡಿದಾಗ ಅದು ಕ್ಲೋಸ್ ಆಗಿತ್ತು" ಅಂತ ಪೊಲೀಸರ ಮುಂದೆ ಹೇಳಿರುತ್ತೇನೆ. ಅಪೋಲೋ ಪಾರ್ಮಸಿ ರಾತ್ರಿ 11.00 ಗಂಟೆಗೆ ಕ್ಲೋಸ್ ಆಗುತ್ತದೆ. ರಾತ್ರಿ 11.30 ಗಂಟೆಗೆ ಏಕೆ ಅಪೋಲೋ ಪಾರ್ಮಸಿಗೆ ಹೋದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ರಾತ್ರಿ 11.00 ಗಂಟೆಯವರೆಗೆ ಸ್ಟಾಕ್ ಬರುತ್ತದೆ ಅದನ್ನು ಪಡೆದು, ಎಂಟ್ರಿ ಮಾಡಿ ಮನೆಗೆ ಆತ ವಾಪಸ್ಸು ಬರಲು ರಾತ್ರಿ 11.30 ರಿಂದ 12.00 ಗಂಟೆಯಾಗುತ್ತದೆ ಎಂದು ನುಡಿದಿರುತ್ತಾರೆ. ನನ್ನ ಮಗ ರೇಣುಕಾ ಸ್ವಾಮಿಯೇ ಸ್ಟಾಕ್ ತೆಗೆದುಕೊಳ್ಳುತ್ತಿದ್ದನು.

ದಿಃ08.06.2024 ರಂದು ರೇಣುಕಾ ಸ್ವಾಮಿ ಇವರು ಸ್ಟಾಕ್ ತೆಗೆದುಕೊಂಡಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅವನು ಇರಲಿಲ್ಲ ಎಂದು ನುಡಿದಿರುತ್ತಾರೆ. ರಾತ್ರಿ 11.30 ರವರೆಗೆ ಅಪೋಲೋ ಪಾರ್ಮಸಿಗೆ ಹೋಗುವ ಅವಶ್ಯಕತೆ ಇತ್ತಾ ಇಲ್ಲವಾ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಮಗ ಬರುವುದನ್ನು ನಾವು ಕಾಯುತ್ತಿದ್ದೆವು ಎಂದು ನುಡಿದಿರುತ್ತಾರೆ. ನನ್ನ ಮಗ ಚಿತ್ರದುರ್ಗದಲ್ಲಿದ್ದು, ಆತ ವಾಪಸ್ಸು ಬರುತ್ತಾನೆ ಎಂಬ ನಂಬಿಕೆ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿದಾರರು ಆತ ಮನೆಗೆ ವಾಪಸ್ಸು ಬರುತ್ತಾನೆ ಎಂಬ ನಂಬಿಕೆ ಇತ್ತು ಎಂದು ನುಡಿದಿರುತ್ತಾರೆ.

ಅಪೋಲೋ ಪಾರ್ಮಸಿಯ ಅಟೆಂಡೆನ್ಸ್ ರಿಜಿಸ್ಟರ್ ಪ್ರಕಾರ ದಿಃ07.06.2024 ರಂದು ನನ್ನ ಮಗ ಪಾರ್ಮಸಿ ಕೆಲಸಕ್ಕೆ ಹೋಗಿದ್ದ ಎಂದರೆ ಸರಿಯಲ್ಲ. ಅಪೋಲೋ ಪಾರ್ಮಸಿಗೆ ರಜೆ ಇಲ್ಲ ಎಂದರೆ ಸರಿಯಲ್ಲ. ದಿಃ07.06.2024 ರಂದು ನನ್ನ ಮಗ ಕೋರ್ಟಿಗೆ ಹೋಗಿ ಬರುತ್ತೇನೆ ಅಂತ ಹೇಳಿ ಹೋಗಿದ್ದ ಎಂದರೆ ನನಗೆ ಗೊತ್ತಿಲ್ಲ. ದಿಃ09.06.2024 ರಂದು

ಅಪೋಲೋ ಪಾರ್ಮಸಿಗೆ ವಿಚಾರಣೆ ಮಾಡಲು ನಾನು ಹೋಗಿಲ್ಲ. ಅಪೋಲೋ ಪಾರ್ಮಸಿಯಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಹಾಗೂ ಅದರ ಮಾಲೀಕರಿಗೆ ಪೋನ್ ಮಾಡಿ ಕೇಳುವ ಅವಶ್ಯಕತೆ ಇರಲಿಲ್ಲ.

ದಿಃ08.06.2024 ರಂದು ನನ್ನ ಮಗ ಅಪೋಲೋ ಪಾರ್ಮಸಿಗೆ ಹೋಗಿ ಬೆಳಗ್ಗೆ ಅಟೆಂಡೆನ್ಸ್ ಹಾಕಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ದಿಃ08.06.2024 ರಿಂದ ದಿಃ10.06.2024 ರವರೆಗೆ ಅಪೋಲೋ ಪಾರ್ಮಸಿಗೆ ಹೋಗಿ ನನ್ನ ಮಗನ ಕುರಿತು ವಿಚಾರಿಸುವ ಅವಶ್ಯಕತೆ ಕಂಡುಬರಲಿಲ್ಲ. ದಿಃ08.06.2024 ರಿಂದ ದಿಃ10.06.2024 ರವರೆಗೆ ಪೊಲೀಸರಿಗೆ ದೂರು ಕೊಡುವ ಅವಶ್ಯಕತೆ ಇತ್ತೇ ಇಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಮಗ ವಾಪಸ್ಸು ಬರುತ್ತಾನೆ ಎಂಬ ನಂಬಿಕೆಯಿಂದ ಇದ್ದೆವು ಎಂದು ನುಡಿದಿರುತ್ತಾರೆ.

ಪೊಲೀಸರ ಮೂಲಕ ನನ್ನ ಮಗ ದುರ್ಗ ಬಾರ್ ಗೆ ಹೋಗಿ ಮದ್ಯ ಸೇವನೆ ಮಾಡಿದ ವಿಚಾರ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಮಗ ಯಾವತ್ತೂ ಮದ್ಯ ಸೇವನೆ ಮಾಡುತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ದಿಃ08.06.2024 ರಂದು ಸಂಜೆ 6.00 ಗಂಟೆಯವರೆಗೆ ನನ್ನ ಮಗ ಚಿತ್ರದುರ್ಗದಲ್ಲಿ ಇದ್ದ ಎನ್ನುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸ್ವಲ್ಪ ಸಮಯದ ನಂತರ ನನ್ನ ಅಣ್ಣನ ಮಗ ಕಾರ್ ಬಳಿ ಬಂದು ನನಗೂ ಮತ್ತು ನನ್ನ ಹೆಂಡತಿಗೂ ಧೈರ್ಯವಾಗಿ ಇರಿ, ರೇಣುಕಾ ಸ್ವಾಮಿಯ ಕೊಲೆಯಾಗಿದೆ ಅಂತ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ದಿಃ11.06.2024 ರಂದು ಬೆಳಗ್ಗೆ 5.00 ಗಂಟೆಗೆ ನಾವು ಬೆಂಗಳೂರಿನ ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಹೋಗುತ್ತಿದ್ದೇವೆ ಎನ್ನುವುದು ಗೊತ್ತಿತ್ತು. ಪೊಲೀಸ್ ಠಾಣೆಗೆ ಹೋಗುತ್ತಿದ್ದೇವೆ ಎನ್ನುವ ವಿಚಾರವನ್ನು ಬಿಟ್ಟು ಬೇರೆ ವಿಚಾರ ಗೊತ್ತಿರಲಿಲ್ಲ ಎಂದರೆ ಸಾಕ್ಷಿದಾರರು ಮಗನ ವಿಚಾರ ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಹೋದಲ್ಲಿ ಗೊತ್ತಾಗುತ್ತದೆ ಎಂದು ತಿಳಿದಿತ್ತು ಎಂದು ನುಡಿದಿರುತ್ತಾರೆ.

ನನ್ನ ಮುಖ್ಯ ವಿಚಾರಣೆಯ ಪುಟ ಸಂಖ್ಯೆ 4 ರ 2 ನೇ ಪ್ಯಾರಾದ ಮೊದಲಿನ ನಾಲ್ಕು ಸಾಲುಗಳಲ್ಲಿ ಹೇಳಿರುವಂತೆ "ಸ್ಕೂಟರ್ ಇದ್ದ ಜಾಗದಲ್ಲಿ ನಾನು ಇದ್ದಾಗ ------ ನನ್ನ ಮಗ ಎಲ್ಲಿದ್ದಾನೆ ಅಂತ ಹೇಳಿದರು " ಎನ್ನುವುದು ನಾನು ಪೊಲೀಸರ ಮುಂದೆ ಹೇಳಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು).

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.